## ಎಲ್ಲಿ ಕೂರುತ್ತಾಳೆ?



ಅಂದು ಗುಂಡನ ಮದುವೆ. ಪುರೋಹಿತನ ಆದೇಶದಂತೆ ಹಸೆಮಣೆಯ ಮೇಲೆ ವಿರಾಜಮಾನನಾಗಿದ್ದ ಗುಂಡ. ಮಂತ್ರ ಹೇಳುತ್ತಿದ್ದ ಪುರೋಹಿತನ ಗಮನವನ್ನು ತನ್ನೆಡೆಗೆ ಸೆಳೆಯುತ್ತ, 'ಪುರೋಹಿತರೇ ಮದುಮಗಳನ್ನು ನನ್ನ ಬಲಬದಿಗೆ ಕೂರಿಸುತ್ತೀರೋ ಅಥವಾ ಎಡಬದಿಗೋ?' ಎಂದು ಕೇಳಿದ.

ಅದಕ್ಕೆ ಪುರೋಹಿತರು ಒಂದು ದೇಶಾವರಿ ನಗು ಬೀರುತ್ತ, 'ಎಲ್ಲೋ ಒಂದು ಕಡೆ ಕೂರಿಸಿದರಾಯಿತು ಬಿಡಪ್ಪ! ಅದಕ್ಯಾಕೆ ಯೋಚನೆ ಮಾಡ್ತಿಯಾ? ಹೇಗಿದ್ದರೂ ಮದುವೆಯಾದ ಮೇಲೆ ಅವಳು ನಿನ್ನ ತಲೆ ಮೇಲೆ ತಾನೇ ಕೂರೋದು?'

ಎನ್ನುತ್ತಿದ್ದಂತೆಯೇ ಗುಂಡ ಅವರನ್ನೇ ಪಿಳ ಪಿಳನೆ ನೋಡುತ್ತ ತೆಪ್ಪಗೆ ಕುಳಿತ.

**ಎಂ.ಕೆ. ಮಂಜುನಾಥ್**

## ಸೊಪ್ಪಿನ ಸಹವಾಸ



ಮಗನನ್ನು ನೋಡಿದೊಡನೆಯೇ ಅಪ್ಪನ ಕೋಪ ನೆತ್ತಿಗೇರಿತ್ತು.

'ಏನೋ? ಕೊತ್ತಂಬರಿ ಸೊಪ್ಪು ತಗೊಂಡು ಬಾ ಅಂದ್ರೇ ಪುದಿನಾ ಸೊಪ್ಪು ತಂದಿಯಲ್ಲಾ! ದಡ್ಡ... ನೀನು ಮನೇಲಿರೋದೇ ದಂಡ, ಮನೆಬಿಟ್ಟು ಆಚೆ ಹೋದರೇನೇ ಬುದ್ಧಿ ಬರೋದು...' ಎಂದು ಗೊಣಗಿಕೊಂಡು ಕುಳಿತ.

ಮಗ, ಒಳಗೆ ಹೋದವನೇ ಖುಷಿಯಿಂದ ಹೊರಗೆ ಬಂದು, 'ನಡೀ ಅಪ್ಪಾ, ನೀನೂ ಸಹ ನನ್ನ ಜೊತೆ ಮನೆ ಬಿಡಬೇಕಾಗುತ್ತೆ. ಅಮ್ಮ ಹೇಳಿದ್ರು, ಅದು ಪುದಿನಾ ಅಲ್ಲ, ಮೆಂತ್ಯ ಸೊಪ್ಪು ಅಂತ!' ಅಂದಾಗ ಅಪ್ಪನ ಮುಖ ಇಂಗು ತಿಂದ ಮಂಗನಂತಾಗಿತ್ತು.

**ಚೈತ್ರಾ ಕುಕ್ಕೆಮನೆ**